| 2017ರ ಐಪಿಎಲ್‌ನಲ್ಲಿ ಅತಿ ಹೆಚ್ಚು ಮೊತ್ತಕ್ಕೆ ಬಿಡ್ ಆದ ವಿದೇಶಿ ಆಟಗಾರರು | | | |
|---|---|---|---|
| ಆಟಗಾರ | ದೇಶ | ತಂಡ | ಮೌಲ್ಯ |
| ಬೆನ್ ಸ್ಟೋಕ್ಸ್ | ಇಂಗ್ಲೆಂಡ್ | ರೈಸಿಂಗ್ ಪುಣೆ ಸೂಪರ್‌ಜೈಂಟ್ಸ್ | 14.5 ಕೋಟಿ |
| ಟೈಮಲ್ ಮಿಲ್ಸ್ | ಇಂಗ್ಲೆಂಡ್ | ರಾಯಲ್ ಚಾಲೆಂಜರ್ಸ್ ಬೆಂಗಳೂರು | 12 ಕೋಟಿ |
| ಟ್ರೆಂಟ್ ಬೌಲ್ಟ್ | ನ್ಯೂಜಿಲೆಂಡ್ | ಕೋಲ್ಕತ್ತ ನೈಟ್ ರೈಡರ್ಸ್ | 5 ಕೋಟಿ |
| ಕಗಿಸೊ ರಬಾಡ | ದಕ್ಷಿಣ ಆಫ್ರಿಕಾ | ಡೆಲ್ಲಿ ಡೇರ್ ಡೆವಿಲ್ಸ್ | 5 ಕೋಟಿ |
| ಪ್ಯಾಟ್ ಕಮಿನ್ಸ್ | ಆಸ್ಟ್ರೇಲಿಯಾ | ಡೆಲ್ಲಿ ಡೇರ್ ಡೆವಿಲ್ಸ್ | 4.5 ಕೋಟಿ |
| ಕ್ರಿಸ್ ವೋಕ್ಸ್ | ಇಂಗ್ಲೆಂಡ್ | ಕೋಲ್ಕತ್ತ ನೈಟ್ ರೈಡರ್ಸ್ | 4.2 ಕೋಟಿ |
| ರಶೀದ್ ಖಾನ್ ಅರ್ಮಾನ್ | ಆಫ್ಘಾನಿಸ್ತಾನ | ಸನ್‌ರೈಸರ್ಸ್ ಹೈದರಾಬಾದ್ | 4 ಕೋಟಿ |
| ನೆಥನ್ ಕಲ್ಟರ್ ನೈಲ್ | ಆಸ್ಟ್ರೇಲಿಯಾ | ಕೋಲ್ಕತ್ತ ನೈಟ್ ರೈಡರ್ಸ್ | 3.5 ಕೋಟ |
| ಟಿ. ನಟರಾಜನ್ | ಭಾರತ | ಕಿಂಗ್ಸ್ ಇಲೆವನ್ ಪಂಜಾಬ್ | 3 ಕೋಟಿ |

**4 ವಿದೇಶಿ ಆಟಗಾರರಿಗೆ ಪಂದ್ಯದಲ್ಲಿ ಆಡುವ ಅಂತಿಮ ಹನ್ನೊಂದು ಆಟಗಾರರಲ್ಲಿ ಸ್ಥಾನ ನೀಡಬಹುದು**

ಅಲ್ಲದೇ ನಮ್ಮ ರಾಜ್ಯದಲ್ಲಿ ನಡೆಯುವ ಕರ್ನಾಟಕ ಪ್ರೀಮಿಯರ್ ಲೀಗ್ ಕೂಡ ಹಲವರಿಗೆ ಅವಕಾಶ ನೀಡಿದೆ. ಪವನ್ ದೇಶಪಾಂಡೆ, ಶಿಶಿರ್ ಭವಾನೆ, ವೈಶಾಕ್ ವಿಜಯ್, ಭರತ್, ಕೆ.ಎಂ. ಕಾರಿಯಪ್ಪ ಅವರಂತಹ ಪ್ರತಿಭೆಗಳು ಬೆಳಕಿಗೆ ಬರಲು ಕಾರಣವಾಗಿದೆ.

### ಯಶಸ್ಸಿನ ಗ್ಯಾರಂಟಿ

ಇವತ್ತಿನ ಕ್ರಿಕೆಟ್‌ನಲ್ಲಿ ಡಾರ್ವಿನ್‌ನ 'ಸಾಮರ್ಥ್ಯ ಇರುವವನೇ ಉಳಿಯುತ್ತಾನೆ' ನಿಯಮ ಹಾಸುಹೊಕ್ಕಾಗಿದೆ. ಸಾಮರ್ಥ್ಯದಲ್ಲಿ ಕೊಂಚ ಏರುಪೇರಾದರೂ ಎಂತಹ ಹಿರಿಯ ಆಟಗಾರನೇ ಆಗಿರಬಹುದು ತಂಡದಿಂದ ಸ್ಥಾನ ಕಳೆದುಕೊಳ್ಳುವುದು ಖಚಿತ. ಏಕೆಂದರೆ ಅವರಷ್ಟೇ ಉತ್ತಮ ಆಟಗಾರರ ದಂಡು ಬೆಂಚ್‌ನಲ್ಲಿ ಕುಳಿತಿರುವುದರಿಂದ ಆಯ್ಕೆ ಸಮಿತಿಗೂ ಹೆಚ್ಚು ಆಯ್ಕೆ ಅವಕಾಶಗಳನ್ನು ನೀಡುತ್ತಿದೆ.



ಸಿಕ್ಸರ್‌ಗಳ ಸರದಾರ ಕ್ರಿಸ್ ಗೇಲ್

ಇತ್ತೀಚೆಗೆ ಮುಕ್ತಾಯವಾದ ಭಾರತದ ಟೆಸ್ಟ್ ಋತುವನ್ನೇ ನೋಡಿ. ಶಿಖರ್ ಧವನ್ ಅವರು ಗಾಯಗೊಂಡಿದ್ದರಿಂದ ಸ್ಥಾನ ಪಡೆದ ರಾಹುಲ್ ಮಿಂಚಿದರು. ವೃದ್ಧಿಮಾನ್ ಸಹಾ ಬದಲಿಗೆ ಸ್ಥಾನ ಪಡೆದಿದ್ದ ಪಾರ್ಥಿವ್ ಪಟೇಲ್, ಅಜಿಂಕ್ಯ ರಹಾನೆ ಬದಲಿಗೆ ಆಡಿದ್ದ ಕರುಣ್ ನಾಯರ್, ಅಮಿತ್ ಮಿಶ್ರಾ ಬದಲಿಗೆ ಆಡಿದ್ದ ಆಲ್‌ರೌಂಡರ್ ಜಯಂತ್ ಯಾದವ್, ಆಸ್ಟ್ರೇಲಿಯಾ ಎದುರಿನ ಸರಣಿಯ ನಾಲ್ಕನೇ ಪಂದ್ಯದಲ್ಲಿ ನಾಯಕ ವಿರಾಟ್ ಕೊಹ್ಲಿ ಬದಲಿಗೆ ಆಡಿದ್ದ ಕುಲದೀಪ್ ಯಾದವ್ ಅವರೆಲ್ಲರೂ ಮಿಂಚಿದ್ದರು. ಸಿಕ್ಕ ಅವಕಾಶವನ್ನು ಬಳಸಿಕೊಂಡಿದ್ದರು. ಆದ್ದರಿಂದ ಸ್ಥಾನ ಉಳಿಸಿಕೊಳ್ಳಲು ಅನುಭವಿಗಳೂ ಕೂಡ ಚೆನ್ನಾಗಿ ಆಡುವ ಅನಿವಾರ್ಯತೆ ನಿರ್ಮಾಣವಾಗಿದೆ. ಆದ್ದರಿಂದಲೇ ಮಹೇಂದ್ರಸಿಂಗ್ ದೋನಿ ಅವರು ತಮ್ಮ ಆಟಕ್ಕಷ್ಟೇ ಸಮಯವನ್ನು ಮೀಸಲಿಟ್ಟು ನಾಯಕತ್ವವನ್ನು ವಿರಾಟ್ ಕೊಹ್ಲಿಗೆ ಬಿಟ್ಟುಕೊಟ್ಟರು.

ಅನುಭವಿ ಮತ್ತು ಯುವ ಆಟಗಾರರ ಸಮ್ಮಿಶ್ರಣದೊಂದಿಗೆ ಜಯದ ಹಾದಿ ಹಿಡಿಯುವ ವಿಶ್ವಾಸವನ್ನು ತಂಡಗಳು ಬೆಳೆಸಿಕೊಂಡಿವೆ. ಹಳೆ ಬೇರು ಹೊಸ ಚಿಗುರು ಇರುವ ಸೊಬಗಿನ ಮರ ಬೆಳೆಸುವ ಪ್ರಕ್ರಿಯೆ ನಡೆಯುತ್ತಿದೆ. ಇದು ಯುವ ವಲಯದಲ್ಲಿ ಉತ್ಸಾಹವನ್ನು ಹೆಚ್ಚಿಸಿದೆ.

ಎಲ್ಲಕ್ಕಿಂತ ಹೆಚ್ಚಾಗಿ ತಮ್ಮ ಮಕ್ಕಳು 18 ರಿಂದ 25ರ ವಯಸ್ಸಿನೊಳಗೆ ಲಕ್ಷ ಲಕ್ಷ ದುಡ್ಡು ಗಳಿಸಿ, ದೊಡ್ಡ ಹೆಸರು ಮಾಡುವ ಅವಕಾಶ ಒದಗಿಸುವ ರಂಗುರಂಗಿನ ಲೀಗ್‌ನತ್ತ ಪಾಲಕರ ಒಲವು ಹೆಚ್ಚುತ್ತಿದೆ.

ಐಪಿಎಲ್ ಬಗ್ಗೆ ಏನೇ ಟೀಕೆಗಳು, ಆರೋಪಗಳು ಮತ್ತು ಅಸಮಾಧಾನಗಳು ಇರಲಿ ಮನರಂಜನೆ ಮತ್ತು ಅವಕಾಶಗಳ ಮೂಲಕ ಯುವಜನಾಂಗದ ಮನಗೆದ್ದಿರುವುದಂತೂ ನಿಜ. ■